# ವೆಂಕಟೇಶ ನಿನ್ನ ನಾಮಕ್ಕೆ ಮೊದಲು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** The wordings given without highlights are as per Ref. 1. The wordings in Ref. 2 are similar to Ref. 1 except few differences which are marked in yellow highlights.
4. **Note:** Singer has followed lyrics as in Ref. 2.

ರಾಗ ಸಿಂಧುಭೈರವಿ ಆದಿ ತಾಳ

ವೆಂಕಟೇಶ ನಿನ್ನ ನಾಮಕ್ಕೆ, ಮೊದಲು ನಾಕಕ್ಷರಗಳು (ನೋಡ್ಯೆ) (ನೋಡೋ) || ಪ ||
ಬಿಂಕವಾದ ನಾಲ್ಕು ವೇದ ಶಾಸ್ತ್ರ (ಪುರಾಣಗಳಿದರಿಂದ್ಯೆ) (ಪುರಾಣಗಳಿದರಿಂದ) || ಅಪ ||

(ವೇದ ಪೊಯ್ದನ) (ವೇದ ವೊಯ್ದನ) ಸಾಗಿಸಿ ಗೆದ್ದ ಮೊದಲು ನೀನಲ್ಲವೆ
ವೇಷವ ತಾಳಿದೆ ಶರಧಿಯ ಮಥನ ಲೇಸು ನಿನಗಲ್ಲವೆ
ವೇಗದಿಂದಲಿ ಎತ್ತಿ ದೈತ್ಯನ ಸೀಳಿದೆ ನೀನಲ್ಲವೆ
ವೆಕ್ಕಸ ಇಹ ಪಾತಕನ ಕರುಳು ನಿನಗೆ ಒಂದು ಮಾಲೆಯಾಗಿಲ್ಲವೆ || 1 ||

ಕಮ್ಮು ಮಾಡಿ ಮೂರುತಿಯಲ್ಲಿ ಬಲಿಯ ಹಾಕಿದೆ ಪಾತಾಳಕ್ಕೆ
ಕಲ್ಮಷ ನುಡಿಯ ಸುತನ ಕೈಯ ಮಾತೆಯ (ಕೊಲ್ಲೋದಕ್ಕೆ) (ಕೊಲ್ಲುವುದಕ್ಕೆ)
ಕಡ ನಿಲ್ಲದೆ ವನವಾಸಕ್ಕೆ ಬಂದೆ ಸೀತೆಯ ಹುಡುಕುವುದಕ್ಕೆ
ಕಂಸ ಮಾವನ ಕೊಂದೆ ತಂದೆ ತಾಯಿಗಳ ಬಿಡಿಸುವುದಕ್ಕೆ || 2 ||

ಟೀಕಿ ಮಾಡಿ ಮೂರ್ಪುರ ಸತಿಯರ ವ್ರತವ ಕೆಡಿಸಿಬಿಟ್ಟೆ
ಟಕ್ಕಿಸಿ ಎಡ ಬಲ ಲಕ್ಷ್ಮಿಯ ತೆಗೆದು ವಕ್ಷಸ್ಥಳದಲಿಟ್ಟೆ
ಟಂಕಿ ಬೆಳ್ಳಿ ಟಂಕಿ ನರಲೋಕಕ್ಕೆ ಉಡುಪಿಗೆ ಮನಸಿಟ್ಟೆ
ಟೀಕೋರ್ಡಿಯಲಿ ಠಾಣವ ಹಾಕಿದೆ ಜಗವ ಕುದುರೆಯ ಬಿಟ್ಟೆ || 3 ||

ಶಾಕದ ತುದಿಯಲ್ಲಿ ಶಾಂತ ಪಾಂಡವರು ದ್ರೌಪದಿ ವನವಾಸ
ಶ್ಯಾಮಸುಂದರ ಶರಣು ಸಜ್ಜನ ಗುರು ಚಂದ್ರ ಭಾಸ
ಶಾಮ ಸಹಿತ ಬಹು ಮುಕ್ತಿಯ ಪೊಂದಿದ ರುಕ್ಮಾಂಗದ ಪೋಷ
ಶಾಶ್ವತ ಸಲಹುವ ಪುರಂದರ ವಿಠಲ ಕಲಿಯುಗ ವೆಂಕಟೇಶ || 4 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

(ಈ ಪದದ ಕಡೆಯ ಮೂರು ನುಡಿಗಳ ಪಾಠ ತೀರ ಅಶುದ್ಧವಾಗಿದೆ.)

**ಬಿಂಕವಾದ** – ಹೆಮ್ಮೆಯ, ಶ್ರೇಷ್ಠವಾದ.

**ವೇದಪೊಯ್ದನ** – ಇಲ್ಲಿಂದ ಮುಂದೆ ದಶಾವತಾರಗಳ ವರ್ಣನೆ.

**ವೆಕ್ಕಸ ಇಹ** – ಕ್ರೂರಿಯಾದ, ನಯವಿಲ್ಲದ.

**ಕಮ್ಮಮಾಡಿ** – ಅಳತೆ ಮಾಡಿ; ಕಮ್ಮ ಮಾಡಿ 'ಮೂರುತಿಯಲಿ' ಎಂದರೆ ವಾಮನಾವತಾರದ ಸೂಚನೆ. ಮುಂದಿನ ಸಾಲುಗಳಲ್ಲಿ 'ಕಡನಿಲ್ಲದೆ' 'ಟೀಕಿಮಾಡಿ' ಮೊದಲಾದ ಮಾತುಗಳೂ ಕಲ್ಕಿಯ ಅವತಾರದ ವರ್ಣನೆಯಲ್ಲಿ ಬಂದಿರುವ ವಿವರಗಳೂ ಅರ್ಥವಾಗುವುದಿಲ್ಲ. ಕಡೆಯ ನುಡಿಯಲ್ಲಿ ಕಡೆಯ ಸಾಲೊಂದೇ ನೇರವಾಗಿರುವುದು.

**ಟಕ್ಕಿಸಿ** – ಮೋಸ ಮಾಡಿ.

**ಟಂಕಿ ಬೆಳ್ಳಿ ಟಂಕಿ** – ಉಡುಪಿಯ ವೈಶಿಷ್ಟ್ಯ. ಈ ನಗರ ಬೆಳ್ಳಿಯ ಟಂಕಿ ನಾಣ್ಯದಂತೆ ಪ್ರಸಿದ್ಧ; ಈ ಊರಿಗೆ ಶಿವಬೆಳ್ಳಿಯೆಂಬ ಹೆಸರೂ ಇದೆ (ರಜತಪೀಠ).

**Classification:** Keerthane
**Ankita:** purandara vittala
**Location:** Tirupati
**Category:** Srinivasa Stuti, Dashavatara

**Sub-Category:** srinivasa, akshara, veda, shastra, purana, Samudra, dashavatara, tayi, sita, kamsa, tande, patni, vrata, Lakshmi, nara, loka, Udupi, jaga, kudure, pandava, draupadi, Chandra, rukmangada, kaliyuga,

**Pravachana:** NA

**Explanation:** NA